ಅಧ್ಯಕ್ಷರು:- ವರದಿಯನ್ನು ಒಪ್ಪಿಸಲಾಯಿತು.

ಅರ್ಜಿಗಳನ್ನೊಪ್ಪಿಸುವುದು.

ಶ್ರೀ ಶ್ರೀಕಾಂತ ರುದ್ರಪ್ಪ ಅಂಬರಗಟ್ಟಿ:- ಮಾನ್ಯ ಅಧ್ಯಕ್ಷರೆ, ಹಿರಿಯೂರು ತಾಲ್ಲೂಕು ಹಳೆಯಲುನಾಡು ಗ್ರಾಮದ ಒಳಚರಂಡಿ ವ್ಯವಸ್ಥೆಯನ್ನು ಕೂಡಲೆ ಮಾಡಬೇಕೆಂದು ಆ ಗ್ರಾಮದ ಗ್ರಾಮಸ್ಥರ ಪರವಾಗಿ ಶ್ರೀ ಸಿ.ರಂಗಯ್ಯ ಅವರು ನೀಡಿರುವ ಅರ್ಜಿಯನ್ನು ಸದನಕ್ಕೆ ಒಪ್ಪಿಸುತ್ತೇನೆ.

ಶ್ರೀ ಮಂಜುನಾಥ್ ಸಿ.ಕುನ್ನೂರ್:- ಮಾನ್ಯ ಅಧ್ಯಕ್ಷರೆ, ಸವಣೂರು ತಾಲ್ಲೂಕು ಕುರುಬರ ಮಲ್ಲೂರ್ ಗ್ರಾಮದ ಹತ್ತಿರವಿರುವ ಬಾಜಿರಾಯನಹಳ್ಳಕ್ಕೆ ಸೇತುವೆ ನಿರ್ಮಾಣ ಮಾಡಬೇಕೆಂದು ಕೋರಿ ಆ ಗ್ರಾಮದ ಗ್ರಾಮಸ್ಥರು ಸಲ್ಲಿಸಿರುವ ಅರ್ಜಿಯನ್ನು ಈ ಸದನಕ್ಕೆ ಒಪ್ಪಿಸುತ್ತೇನೆ.

ಅಧ್ಯಕ್ಷರು:- ಅರ್ಜಿಗಳನ್ನು ಒಪ್ಪಿಸಲಾಯಿತು.

ಸಮಿತಿಯ ಕಾಲಾವಧಿ ವಿಸ್ತರಣೆ

ಶ್ರೀ ಶರಣ ಬಸಪ್ಪ ದರ್ಶನಾಪುರ:- ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ವಿದ್ಯುತ್ ದರವನ್ನು ಪುನರ್ ವಿಮರ್ಶಿಸುವ ಬಗ್ಗೆ ಪರಿಶೀಲಿಸಿ ದಿನಾಂಕ 20.7.96ರ ಒಳಗಾಗಿ ವರದಿಯನ್ನು ಸಲ್ಲಿಸಲು ರಚಿಸಲಾದ ಜಂಟಿ ಸದನ ಸಮಿತಿಯು ತನ್ನ ವರದಿಯನ್ನು ಒಪ್ಪಿಸಲು ದಿನಾಂಕ 27.7.96ರವರೆಗೆ ಕಾಲಾವಧಿಯನ್ನು ವಿಸ್ತರಿಸಬೇಕೆಂದು ಕೋರುತ್ತೇನೆ.

ಪ್ರಸ್ತಾಪ ಮಂಡಿಸಲಾಯಿತು.

ಅಧ್ಯಕ್ಷರು:- ಪ್ರಸ್ತಾಪ ಏನೆಂದರೆ ಜಂಟಿ ಸದನ ಸಮಿತಿಯು ವರದಿ ಸಲ್ಲಿಸಬೇಕೆಂಬ ಕಾಲಾವಧಿಯನ್ನು ಮುಂದುವರಿಸುವುದು ಎಕ್ಸಟೆನ್‌ಷನ್ ಕೇಳಿದ್ದಾರೆ ಒಂದು ವಾರ, ಸೆಷನ್ಸ್ ಇದೆ. ಪವರ್ ಹೈಕ್ ಮೇಲೆ ಜಾಯಿಂಟ್ ಕಮಿಟಿ ಮಾಡಿದ್ದೇವಲ್ಲ, 20ಕ್ಕೆ ರಿಪೋರ್ಟ್ ಕೊಡಬೇಕೆಂದು ಹೇಳಿದ್ದೆವು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಪರ್ಮನೆಂಟ್‌ಲಿ ಕೇಳಿದರೂ ಕೊಟ್ಟು ಬಿಡಬಹುದು ಏಕೆಂದರೆ ಸ್ಟೇ ಅಂತೂ ಆಗಿದೆ.

ಶ್ರೀ ವಿಶ್ವೇಶ್ವರ ಹೆಗಡೆ:- ಬೆಲೆ ಏರಿಸುವುದಿಲ್ಲ ಎಂದರೆ ಒಂದು ವರ್ಷ ಬೇಕಾದರೂ ಮುಂದೆ ಹಾಕಿ ಸಾರ್.

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಕೊಡಬಹುದು ಎಂದು ಎರಡೂ ಕೈ ಎತ್ತುತ್ತಿದ್ದಾರೆ ನಿಮ್ಮ ಪರವಾಗಿ ಹೇಳಿದರೂ ನಿಮಗೆ ಸಂತೋಷ ಇಲ್ಲ ಎಂದರೆ ಹೇಗೆ?

ಶ್ರೀ ಧರ್ಮಸಿಂಗ್:- ಮಾನ್ಯ ಅಧ್ಯಕ್ಷರೆ, ನಾನು ತಮಗೆಲ್ಲರಿಗೂ ಬರೆದು ಕಳಿಸಿದ್ದೆ ನನ್ನ ಮತಕ್ಷೇತ್ರದಲ್ಲಿ ಈ ದಿನ ನಡೆಯಬೇಕಾಗಿದ್ದ ಗ್ರಾಮ ಪಂಚಾಯಿತಿಯ...

ಅಧ್ಯಕ್ಷರು:- ಒಂದು ನಿಮಿಷ ಅದನ್ನು ಮುಗಿಸಿ ಬಿಡುತ್ತೇನೆ.

ಪ್ರಸ್ತಾಪ ಏನೆಂದರೆ ''ಹಿರಿಯ ಜೈಲು ಬಗ್ಗೆ ಜಂಟಿ ಸದನ ಸಮಿತಿಯ ಕಾಲಾವಧಿಯನ್ನು ಒಂದು ಬಾರಿಗೆ ವಿಸ್ತರಿಸುವುದು''

(ಪ್ರಸ್ತಾಪ ಅಂಗೀಕಾರವಾಯಿತು ಹಾಗೂ ಒಂದು ಬಾರಿ ಕಾಲಾವಧಿ ವಿಸ್ತರಣೆಗೆ ಅನುಮೋದನೆ ದೊರಕಿತು)

ಅಧ್ಯಕ್ಷರು:- ಮಾನ್ಯ ಶಿರೆಸ್ತಾದಾರರೆ, ಧರ್ಮಸಿಂಗ್ ಅವರು ಒಂದು ವಿಚಾರವನ್ನು ಪ್ರಸ್ತಾಪ ಮಾಡಬೇಕೆಂದು ಕೋರಿದ್ದಾರೆ; ಅದಕ್ಕೆ ಒಂದು ಅವಕಾಶವನ್ನು ಕೊಡುತ್ತೇನೆ. ಆಮೇಲೆ ನೀವು ಹೇಳಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಅವರು ನಿಂತಾಗಲೇ ನಾವು ಬೆಂಬಲ ಕೊಡಬೇಕು.

ಅಧ್ಯಕ್ಷರು:- ನಾವು ನೀವು ಎಲ್ಲ ಅವರಿಗೆ ಬೆಂಬಲ ತಾನೇ.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ವಿಷಯ:- ಟೌನ್ ಪಂಚಾಯಿತಿ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಚುನಾವಣೆಯನ್ನು ಮುಂದೂಡಿರುವುದು.

+ ಶ್ರೀ ಧರ್ಮಸಿಂಗ್:- ಮಾನ್ಯ ಅಧ್ಯಕ್ಷರೆ, ಈ ದಿನ ನನ್ನ ಮತ ಕ್ಷೇತ್ರದಲ್ಲಿ ಚುನಾವಣೆ ನಡೆಯಬೇಕಾಗಿತ್ತು. ಸರ್ಕಾರ ದಿನಾಂಕ ಕೂಡ ನಿಗದಿಪಡಿಸಿತ್ತು. ಈಗಾಗಲೇ ಫೋನ್ ಮುಖಾಂತರ ಗೊತ್ತಾಗಿದೆ. ಅದನ್ನು ಪೋಸ್ಟ್‌ಪೋನ್ ಮಾಡಿದ್ದಾರೆ. ಆ ಪ್ರೆಸಿಡೆಂಟ್ ಮತ್ತು ವೈಸ್ ಪ್ರೆಸಿಡೆಂಟ್‌ಗೆ ಅಗತ್ಯಕ್ಕೆ ಚುನಾವಣೆಯನ್ನು ಅವತ್ತಿನ ದಿವಸ ಮುಂದೂಡಲಾಗಿದೆ. ಈ ದಿನ ಸಂಬಂಧಪಟ್ಟ ಮಂತ್ರಿಗಳೂ ಇಲ್ಲ, ಮಾನ್ಯ ಮುಖ್ಯಮಂತ್ರಿಗಳೂ ಕೂಡ ಇಲ್ಲ ಇಲ್ಲ. ಸರ್ಕಾರಿಯ ವ್ಯವಹಾರ ಮಂತ್ರಿಗಳು ಇದ್ದಾರೆ. ಗುಲ್ಬರ್ಗ ಜಿಲ್ಲೆಯಲ್ಲಿ ಚಿಂಚೋಳಿ, ಅಫಜಲಪುರ ಮತ್ತು ಜೇವರ್ಗಿ ಮೂರು ಟೌನ್ ಪಂಚಾಯಿತಿ ಇವೆ. ಈಗಾಗಲೇ ಗೆಜೆಟ್ ನೋಟಿಫಿಕೇಶನ್ ಆಗಿದೆ. ಕೋರ್ಟ್ ಪ್ರಕಾರ ನಮ್ಮಲ್ಲಿ ಜೇವರ್ಗಿಯಲ್ಲಿ ಪರಿಶಿಷ್ಟ ಮಹಿಳೆ ಮತ್ತು ಸಾಮಾನ್ಯ ಅಧ್ಯಕ್ಷ ಉಪಾಧ್ಯಕ್ಷರ ಚುನಾವಣೆ ನಡೆಯತಕ್ಕದ್ದು. ಅದರ್ಲಿ ಚುನಾವಣೆ ನಿಗದಿ ಪಡಿಸಿ ಎಲ್ಲಾ ಸದಸ್ಯರು ಕೂಡ ಕಛೇರಿಗೆ ಹೋಗಿದ್ದಾರೆ. ಅಲ್ಲಿಂದ ಮಾರಾಣೆ ಮುಂಜಾನೆ ಸರ್ಕಾರದಿಂದ ಈ ಚುನಾವಣೆಯನ್ನು ಮುಂದೂಡಲಾಗಿದೆ ಎಂದು ಆದೇಶ ಹೋಗಿದೆ. ಮತ್ತು ಅಫಜಲಪುರದಲ್ಲಿ ನಡೆಯತಕ್ಕ ಚುನಾವಣೆ ಏನು ಇದೆ. ಅಲ್ಲಿರತಕ್ಕಂಥ ಹಿಂದುಳಿದ ಮಹಿಳೆ ಮತ್ತು ಅಲ್ಲಿ ಪರಿಶಿಷ್ಟ ಜಾತಿಯವರು ಉಪಾಧ್ಯಕ್ಷರು ಆಗಬೇಕು. ಆ